ಬಾಯಿಂದ ತಪ್ಪಿಸಿಕೊಂಡು ಹೊಸ ಜನ್ಮ ಪಡೆದಂತೆ ಚಿಗಿತುಕೊಂಡಿದ್ದಳು ಕಾವೇರಿ. ಅಣ್ಣನ ಮಕ್ಕಳಿಬ್ಬರು ಎರಡು ಕಣ್ಣುಗಳಂತೆ ಅವಳ ಜೊತೆ ಬೆಳೆಯುತ್ತಾ, ಗಂಡುಹುಡುಗ ಶಶಿಧರ ತಂಗಿಯಷ್ಟು ಅತ್ತೆಯನ್ನು ಹಚ್ಚಿಕೊಳ್ಳಲಿಲ್ಲ. ಗಂಡುಮಕ್ಕಳ ಲೋಕವೇ ಬೇರೆ. ಮನೆಯೊಳಗಿನ ಜಗತ್ತಿಗಿಂತಾ ಹೊರಗಿನ ಪ್ರಪಂಚವೇ ಹಿತ. ಹಿಂಡುಗಟ್ಟಲೆ ಸ್ನೇಹಿತರು. ಪಾಠಕ್ಕಿಂತಾ ಹೆಚ್ಚು ಆಟ. ಮನೆಯಲ್ಲಿದ್ದನೆಂದರೆ ತಂಗಿಯನ್ನು ಕೆಣಕಿ ಗೋಳಾಡಿಸುತ್ತಾ 'ಅತ್ತೇ...' ಎನ್ನುತ್ತಾ ತನ್ನ ಸೆರಗು ಹಿಡಿದು ಹಿಂದೆ ಹಿಂದೆ ತಿರುಗುತ್ತಿದ್ದ ಮುದ್ದು ಕಂದ ಕಾವೇರಿಯಲ್ಲಿದ್ದ ಮಾತೃಪ್ರೇಮವನ್ನು ಉದ್ದೀಪಿಸಿದ್ದಳು. ಪುಟ್ಟ ಅಡುಗೆಮನೆಯಲ್ಲಿ ಅತ್ತೆ ಅಡುಗೆ ಮಾಡುತ್ತಿದ್ದರೆ ಅಲ್ಲೇ ಕೂತು ಓದು, ಬರವಣಿಗೆ ಮಾಡಿಕೊಳ್ಳುತ್ತಾ, ಅತ್ತೆ ಕಾಯಿ ತುರಿಯುತ್ತಿದ್ದರೆ ಇವಳಿಗಿಷ್ಟು ನೈವೇದ್ಯ. ಬೆಲ್ಲ ತೆಗೆದರೆ ಇವಳಿಗೊಂದು ತುಂಡು. ಹುಣಿಸೆಹಣ್ಣನ್ನು ಯಾರಾದರೂ ಹಣ್ಣಿನ ಜಾತಿಗೆ ಸೇರಿಸುತ್ತಾರಾ? ಅದನ್ನೂ ದವಡೆಯಲ್ಲಿಟ್ಟುಕೊಂಡು ರಸ ನುಂಗುತ್ತಾ, ಜಗಿಯಲು ಏನೂ ಇಲ್ಲದಿದ್ದರೆ ಓದಿದ್ದು ಅವಳ ತಲೆಗೆ ಹತ್ತುವುದಿಲ್ಲ ಅನ್ನುತ್ತಿದ್ದ ಶಶಿಧರ. ವರ್ಷಗಳು ಅದ್ಯಾವ ಮಾಯದಲ್ಲಿ ರೆಕ್ಕೆ ಕಟ್ಟಿಕೊಂಡು ಹಾರಿಹೋದುವೋ? ಪಿಯುಸಿ ಮುಗಿಸಿದ ಶಶಿಧರ ಬೆಂಗಳೂರಿನ ಕಾಲೇಜಿನಲ್ಲಿ ಎಂಜಿನಿಯರಿಂಗ್‌ಗೆ ಸೇರಿಕೊಂಡು, ಮನೆಯಲ್ಲಿ ಅತ್ತೆ, ಸೊಸೆ ಇಬ್ಬರೇ.

"ಇಬ್ಬರೇ ಯಾಕೆ ಅಲ್ಲಿರ್ಬೇಕು? ಅವಳೇನು ಬೆರಳು ಚೀಪೋ ಮಗು ಅಲ್ಲ. ಬಸ್ಸಲ್ಲಿ ಓಡಾಡ್ಕೊಂಡು ಓದ್ತಾಳೆ" ಅಂದಿದ್ದಳು ಸೌಭಾಗ್ಯ. ಎದೆ ಝುಗ್ ಅಂದಿತ್ತು ಕಾವೇರಿಗೆ. ಆಸುಪಾಸಿನವರೊಡನೆ ವಿಶ್ವಾಸ ಬೆಳೆಸಿಕೊಂಡು ಪುರುಸೊತ್ತು ಸಿಕ್ಕಾಗ ಅವರೊಡನೆ ಲೋಕಾಭಿರಾಮವಾಗಿ ಸಲ್ಲಪಿಸುತ್ತಾ, ಮೆಂಬರಾದ ಸಾರ್ವಜನಿಕ ಲೈಬ್ರರಿಯಿಂದ ಕಾದಂಬರಿಗಳನ್ನು ತಂದು ತಂದು ಗಿರ ಹಿಡಿದವಳಂತೆ ಓದುತ್ತಾ, ಎಷ್ಟಿತ್ತು ಮನೆಕೆಲಸ? ಆಟ ಆಡಿದ ಹಾಗೆ. ಇನ್ನು ಎಲ್ಲಕ್ಕೂ ಬೀಳುತ್ತದೆ ಪೂರ್ಣವಿರಾಮ. ಮತ್ತೆ ಹಳ್ಳಿ ಮನೆ. ಅತ್ತಿಗೆಯ ದರ್ಬಾರಿನಲ್ಲಿ ಅಡಿಯಾಳು. ಕೃತಜ್ಞತೆಯಿಲ್ಲದ ಗೆಯ್ಮೆ. ಕಣ್ಣೀರು ಕಪಾಳಕ್ಕೆ ಬರುವುದರೊಳಗೆ ಶುಭದಾ ಈ ಸಮಸ್ಯೆಯನ್ನು ಬಗೆಹರಿಸಿದ್ದಳು.

"ದಿನಾ ಬಸ್ಸಲ್ಲಿ ನೇತಾಡ್ಕೊಂಡು ಕಾಲೇಜಿಗೆ ಹೋಗು ಅಂದ್ರೆ ನಾನು ಓದೋದ್ಯಾವಾಗ? ಬೆಳಿಗ್ಗೆ ತಿಂಡಿಗೆ ಪುರಸೊತ್ತಿರಲ್ಲ, ಮಧ್ಯಾಹ್ನ ಊಟ ಇರಲ್ಲ..."

"ಹೌದು ಕಣೇ. ಇನ್ನೊಂದು ನಾಕೊರ್ಷ ಇರ್ಲಿ ಅಲ್ಲೇ..." ಅಣ್ಣ ತಲೆ ಹಾಕಿದ್ದ. ಸೌಭಾಗ್ಯನಿಗೆ ಏನೆನ್ನಿಸಿತೋ? ನಾಳೆ ಮದುವೆಯಾಗಬೇಕಾದ ಹುಡುಗಿ ಗಂಡಸರಿಗೆ ಒತ್ತಿಕೊಂಡು ನಿಂತು ಬಸ್ಸಲ್ಲಿ ಓಡಾಡಬೇಕಾದ ಪ್ರಮೇಯ ನೆನೆದು ಮೈ ಜುಂಗರಿಸಿತಾ ಅಥವಾ ಹೊತ್ತುಹೊತ್ತಿಗೆ ಊಟ, ತಿಂಡಿ ಇಲ್ಲದೆ ಮಗಳು ಒಣಗಿದರೆ ಎನ್ನುವ ಕರುಳು ಕಾಡಿತಾ, ಅಥವಾ ಹೇಳಕೇಳುವವರು ಹತ್ತಿರದಲ್ಲಿಲ್ಲದಿದ್ದರೆ ಪ್ರಾಯ ತುಳುಕುವ ಹುಡುಗಿ ಅಡ್ಡದಾರಿ ಹತ್ತಿದರೆ ಅನ್ನುವ ಭಯ ಕಾಡಿತಾ? ಏನೋ ಒಂದು.

★★★

ಶುಭದಾನ ಮದುವೆ ಗೊತ್ತಾಗುವವರೆಗೆ ಪೇಟೆಮನೆಯ ಋಣ ತೀರಲಿಲ್ಲ. ಬಿ.ಎಸ್ಸಿ. ಮುಗಿಸಿದವಳು ಅದೆಂತದೋ ಕಂಪ್ಯೂಟರ್ ಕೋರ್ಸಿಗೆ ಸೇರಿಕೊಂಡು, 'ಮದುವೆ ಆಗೋವರೆಗೆ ಒಂದೆರಡು ವರ್ಷ ಅಪ್ಪ ಅಮ್ಮನ ಜೊತೆ ಸುಖವಾಗಿ ಇರ್ಬಾರ್ದನೇ? ತಲೆಕೂದಲು ಬೆಳ್ಳಗಾಗೋವರೆಗೆ ಓದ್ತಾನೇ ಇರೋದಾ? ಹೇಳಿದ್ದೊಂದು ಕೇಳೋ ಪಂಚಾತಿಕೆ ಇಲ್ಲ' ಬಂದಿತ್ತು